**Series FH1EG**

**SET ~ 4**

**Q.P. Code 15**

रोल नं.
**Roll No.**

Candidates must write the Q.P. Code on the title page of the answer-book.

- ಈ ಪ್ರಶ್ನೆಪತ್ರಿಕೆಯಲ್ಲಿ **16** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **16** printed pages.
- Q.P. Code given on the right hand side of the question paper should be written on the title page of the answer-book by the candidate.
- Please check that this question paper contains **15** questions.
- **Please write down the serial number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* — *ಗರಿಷ್ಠ ಅಂಕಗಳು : **80***

*Time allowed : **3** hours* — *Maximum Marks : **80***

**General Instructions :**

Read the following instructions carefully and follow :

1. This question paper contains **A, B, C, D,** Sections.
   It has Total **15** questions.
2. **Section A :** (Unseen Paragraph) Question No. **1** to **2**.
3. **Section B :** MCQ Questions (Grammar) Question No. **3** to **6**.
4. **Section C :** (Seen Comprehension) Question No. **7** to **9**.
5. **Section D :** Descriptive type questions. Question No. **10** to **15**.
   Attempt Questions as per specific instructions.
   Write Question No. in answer book before attempting it.

**ಸೂಚನೆಗಳು :**

**ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :**

1. ಪ್ರಶ್ನೆ ಪತ್ರಿಕೆಯು **A, B, C, D** ವಿಭಾಗಗಳನ್ನು ಒಳಗೊಂಡಿದೆ.
2. **ವಿಭಾಗ A,** (ಗದ್ಯಾಂಶ / ವಾಕ್ಯವೃಂದ) ಪ್ರಶ್ನೆ ಸಂಖ್ಯೆ **1** ರಿಂದ **2**.
3. **ವಿಭಾಗ B,** (ಬಹುಆಯ್ಕೆ ಪ್ರಶ್ನೆಗಳು) ಪ್ರಶ್ನೆ ಸಂಖ್ಯೆ **3** ರಿಂದ **6**.
4. **ವಿಭಾಗ C,** (ಗ್ರಹಿಕಾ ಕೌಶಲ್ಯ) ಪ್ರಶ್ನೆ ಸಂಖ್ಯೆ **7** ರಿಂದ **9**.
5. **ವಿಭಾಗ D,** (ವರ್ಣನಾತ್ಮಕ) ಪ್ರಶ್ನೆ ಸಂಖ್ಯೆ **10** ರಿಂದ **15**.
   ಕೊಟ್ಟಿರುವ ಸೂಚನೆಗಳಿಗೆ ತಕ್ಕಂತೆ ಪ್ರಶ್ನೆಗಳನ್ನು ಉತ್ತರಿಸಿ.
   ಪ್ರಶ್ನೆಗಳಿಗೆ ಉತ್ತರಿಸುವ ಮುಂಚೆ ಉತ್ತರ ಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸಿ.

## Section – A

**1.** ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಬಹಳ ಹಿಂದೆಯೇ, ಕೃತಕ ಬುದ್ದಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ – ಎಐ) ಎಂಬುದು ನಮಗೆ ಕಲ್ಪನೆಯ ವಿಷಯ ಮಾತ್ರವಾಗಿತ್ತು. ಆದರೆ ಇಂದು ಇದು ಅಸಾಧಾರಣ ತಂತ್ರಜ್ಞಾನವಾಗಿ ಬೆಳೆಯುತ್ತಿದೆ ಮತ್ತು ಇದು ಈಗಾಗಲೇ ನಮ್ಮ ಸುತ್ತಲೂ ವ್ಯಾಪಿಸಿದೆ.

ವೈಯಕ್ತೀಕರಿಸಿದ ಶಾಪಿಂಗ್ ಮತ್ತು ಕಲಿಕೆ, ವರ್ಚುವಲ್ ಅಸಿಸ್ಟೆಂಟ್‌ಗಳು, ಸ್ಮಾರ್ಟ್ ಕಂಟೆಂಟ್, ಸೈಬರ್ ಸೆಕ್ಯುರಿಟಿ, ಸ್ವಾಯತ್ತ ವಾಹನಗಳು, ಮುಖ ಗುರುತಿಸುವಿಕೆ ಮತ್ತು ಇನ್ನೂ ಹೆಚ್ಚಿನ ಕ್ಷೇತ್ರಗಳನ್ನು ಒಳಗೊಂಡಂತೆ 'ಕೃತಕ ಬುದ್ಧಿಮತ್ತೆ' (ಎಐ) ಇಂದು ಬಹಳಷ್ಟು ವಿಷಯಗಳನ್ನು ಚಾಲನೆ ಮಾಡುತ್ತಿದೆ.

ಒಂದು ಉದ್ಯಮವಾಗಿ ಕೃತಕ ಬುದ್ಧಿಮತ್ತೆಯು ಮುಂಬರುವ ದಿನಗಳಲ್ಲಿ 432.8 ಶತಕೋಟಿ ಡಾಲರ್ ಗಳಿಗೆ ಬೆಳೆಯುವ ನಿರೀಕ್ಷೆಯಿದೆ ಎಂದು ಇಂಟರ್‌ನ್ಯಾಷನಲ್ ಡಾಟಾ ಕಾರ್ಪೋರೇಷನ್‌ನ ಇತ್ತೀಚಿನ ವರದಿ ಹೇಳಿದೆ.

ಅದರ ಸಾಮರ್ಥ್ಯ ಎಷ್ಟು ದೊಡ್ಡದಾಗಿದೆ ಎಂದರೆ 2030 ರ ವೇಳೆಗೆ ಎಐ ಉದ್ಯಮವು 15 ಟ್ರಿಲಿಯನ್ ಡಾಲರ್‌ಗಳ ಮೌಲ್ಯವನ್ನು ಹೊಂದಲಿದೆ ಎಂದು ಹೆಸರಾಂತ ಕಾರ್ಪೋರೇಟ್ ಫೈನಾನ್ಸ್ ಅಕೌಂಟಿಂಗ್ ಸೇವೆಗಳ ಸಂಸ್ಥೆ ಪ್ರೈಸ್ ವಾಟರ್ ಹೌಸ್ ಕೂಪರ್ಸ್ ಅಂದಾಜಿಸುತ್ತದೆ.

ಇಂದು ವಿಶ್ವಾದ್ಯಂತ ರಕ್ಷಣಾ ಉದ್ಯಮಗಳು ಸಹ ಎಐ ಯ ಶಕ್ತಿಯನ್ನು ಬಳಸಿಕೊಳ್ಳಲು ನೋಡುತ್ತಿವೆ. ಭಾರತವು ಸಹ ಎಐ ಕಡೆ ತನ್ನ ಆಸಕ್ತಿಯನ್ನು ಹೆಚ್ಚಿಸಿದೆ. ಭಾರತ ಮತ್ತು ಅಮೇರಿಕಾ ರಕ್ಷಣಾ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಸಂವಾದವನ್ನು ಪ್ರಾರಂಭಿಸಲು ಒಪ್ಪಿಕೊಂಡಿವೆ ಮತ್ತು ತಮ್ಮ ಜಂಟಿ ಸೈಬರ್ ತರಬೇತಿ ಮತ್ತು ಚಟುವಟಿಕೆಗಳನ್ನು ವಿಸ್ತರಿಸಲು ಬದ್ಧವಾಗಿವೆ ಎಂದು ಪೆಂಟಾಗನ್ ಘೋಷಿಸಿದೆ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ದೇಶಾದ್ಯಂತ ಸಾರ್ವಜನಿಕ ಕಲ್ಯಾಣಕ್ಕಾಗಿ ಸ್ವಯಂಚಾಲಿತ ಮೇಲ್ವಿಚಾರಣಾ ವ್ಯವಸ್ಥೆಗಳು, ಸಂವಾದಾತ್ಮಕ ಎಐ ಪರಿಹಾರಗಳು, ವಂಚನೆ ಪತ್ತೆ ಮತ್ತು ಇನ್ನಷ್ಟು ಕ್ಷೇತ್ರಗಳಲ್ಲಿ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಗಮನಾರ್ಹ ಕ್ರಮಗಳನ್ನು ಕೈಗೊಂಡಿವೆ.

**ಪ್ರಶ್ನೆಗಳು.**

I. ನಮಗೆ ಯಾವುದು ಕಲ್ಪನೆಯ ವಿಷಯವಾಗಿತ್ತು ?

(a) ದೂರದರ್ಶನ ವೀಕ್ಷಣೆ

(b) ಆನ್‌ಲೈನ್ ಬ್ಯಾಂಕಿಂಗ್ ವ್ಯವಹಾರ

(c) ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ )

(d) ಕಥೆ ಹೇಳುವುದು

II. ಒಂದು ಉದ್ಯಮವಾಗಿ ಕೃತಕ ಬುದ್ಧಿಮತ್ತೆಯು ಎಷ್ಟು ಡಾಲರ್‌ಗಳಿಗೆ ಬೆಳೆಯುವ ನಿರೀಕ್ಷೆಯಿದೆ ?

(a) 432.8 ಶತಕೋಟಿ ಡಾಲರ್‌ಗಳಿಗೆ (b) 431.8 ಶತಕೋಟಿ ಡಾಲರ್‌ಗಳಿಗೆ

(c) 423.8 ಶತಕೋಟಿ ಡಾಲರ್‌ಗಳಿಗೆ (d) 430.8 ಶತಕೋಟಿ ಡಾಲರ್‌ಗಳಿಗೆ

III. ಹೆಸರಾಂತ ಕಾರ್ಪೋರೇಟ್ ಫೈನಾನ್ಸ್ ಅಕೌಂಟಿಂಗ್ ಸೇವೆಗಳ ಸಂಸ್ಥೆ ಯಾವುದು ?

(a) ರಕ್ಷಣಾ ಇಲಾಖೆ (b) ಇಂಟರ್‌ನ್ಯಾಶನಲ್ ಡಾಟಾ ಕಾರ್ಪೋರೇಷನ್

(c) ಪ್ರೈಸ್ ವಾಟರ್‌ಹೌಸ್ ಕೂಪರ್ಸ್ (d) ಎಐ ತಂತ್ರಜ್ಞಾನ ಸಂಸ್ಥೆ

IV. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಕಲ್ಯಾಣಕ್ಕಾಗಿ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಮುಂದಾಗಿವೆ ?

(a) ಆರ್ಥಿಕತೆಯ ಕಲ್ಯಾಣಕ್ಕಾಗಿ (b) ಸಾಮಾಜಿಕ ಕಲ್ಯಾಣಕ್ಕಾಗಿ

(c) ಮಕ್ಕಳ ಕಲ್ಯಾಣಕ್ಕಾಗಿ (d) ಸಾರ್ವಜನಿಕ ಕಲ್ಯಾಣಕ್ಕಾಗಿ

V. ಪೆಂಟಾಗನ್ ಎಲ್ಲಿದೆ ?

(a) ಅಮೆರಿಕಾದಲ್ಲಿದೆ (b) ರಷ್ಯಾದಲ್ಲಿದೆ

(c) ಚೀನಾದಲ್ಲಿದೆ (d) ಜಪಾನ್‌ನಲ್ಲಿದೆ

**ಅಥವಾ / OR**

ಹ್ಯೂಮನ್ ಲೈಬ್ರರಿಗಳ ಪರಿಕಲ್ಪನೆ ಹೊಸತೇನಲ್ಲ. ಮೊದಲ 'ಮಾನವ ಗ್ರಂಥಾಲಯ' ಶುರುವಾದುದು ಡೆನ್ಮಾರ್ಕ್‌ನಲ್ಲಿ 2000 ನೆಯ ಇಸವಿಯಲ್ಲಿ. ಎರಡು ದಶಕಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಸುಮಾರು ಎಂಬತ್ತು ದೇಶಗಳಿಗೆ ಹಬ್ಬಿರುವ 'ಹ್ಯೂಮನ್ ಲೈಬ್ರರಿ' ಪರಿಕಲ್ಪನೆ ಆಂದೋಲನದ ರೂಪ ಪಡೆದುಕೊಂಡಿದೆ. ಭಿನ್ನ ವರ್ಗದ ವ್ಯಕ್ತಿಗಳೊಂದಿಗೆ ಮಾತುಕತೆಗೆ ಅವಕಾಶ ಕಲ್ಪಿಸುವ ಈ ಲೈಬ್ರರಿಗಳು – ಜನ ತಮ್ಮ ಕೀಳರಿಮೆ ಮತ್ತು ಪೂರ್ವಾಗ್ರಹಗಳನ್ನು ಕಳೆದುಕೊಳ್ಳಲು ನೆರವಾಗುವ ಉದ್ದೇಶ ಹೊಂದಿವೆ. ದೆಹಲಿ, ಮುಂಬೈ, ಹೈದರಾಬಾದ್, ಇಂದೋರ್ ಮತ್ತು ಚೆನ್ನೈಗಳಲ್ಲಿ 'ಮಾನವ ಗ್ರಂಥಾಲಯಗಳಿದ್ದರೂ, ಭಾರತದಲ್ಲಿನ್ನು ಈ ಪರಿಕಲ್ಪನೆ ಅಷ್ಟಾಗಿ ಜನಪ್ರಿಯಗೊಂಡಿಲ್ಲ'.

ವಿಶಿಷ್ಟ ಲೈಬ್ರರಿಗಳಾದ 'ಹ್ಯೂಮನ್ ಲೈಬ್ರರಿ'ಗಳಿಗೆ ಮನುಷ್ಯನೊಳಗಿನ ಹಿಂಸೆಯನ್ನು ಶಮನಗೊಳಿಸುವ ಆಶಯವಿದೆ. ಪುಸ್ತಕಾಲಯಗಳಂತೆಯೇ 'ಮಾನವ ಗ್ರಂಥಾಲಯ'ಗಳ ಚಳುವಳಿ ಆರಂಭಗೊಳ್ಳಬೇಕಿದೆ. ಪುಸ್ತಕಗಳನ್ನು ಓದುವುದೆಂದರೆ ಮನುಷ್ಯರನ್ನು ಓದಿದಂತೆಯೇ ಎನ್ನುವ ಮಾತು ಸರಿ. ಆದರೆ ಇಬ್ಬರು ವ್ಯಕ್ತಿಗಳು ಎದುರುಬದುರಾಗಿ ಕೂತು ಮನಸ್ಸು ಬಿಚ್ಚಿ ಮಾತನಾಡುವುದಿದೆಯಲ್ಲ – ಆ ಓದಿನಷ್ಟು ಪರಿಣಾಮಕಾರಿಯಾದುದು ಮತ್ತೊಂದಿಲ್ಲ.

ಈಗ ಮನುಷ್ಯರಿಗೆ ಓದಲಿಕ್ಕೆ ಇರುವ ಅಡೆತಡೆಗಳೇನು ? ಈಗಲೂ ಹತ್ತು ಜನ ಒಂದೆಡೆ ಸೇರಿದ್ದರೂ ಅವರ ನಡುವೆ ಮೊಬೈಲ್ ಫೋನಿನ ಗೋಡೆಯಿರುವ ಸನ್ನಿವೇಶ ಇಂದಿನದು. ಬಸ್ಸು, ರೈಲು, ವಿಮಾನ, ಆಸ್ಪತ್ರೆ – ಎಲ್ಲೆಡೆಯೂ ಜನ ಮೊಬೈಲ್‌ಗಳಲ್ಲಿ ಕಣ್ಣು ನೆಟ್ಟಿರುತ್ತಾರೆಯೇ ವಿನಾ, ಪಕ್ಕದ ವ್ಯಕ್ತಿಯ ಬಗ್ಗೆ ಆಸಕ್ತಿ ವಹಿಸುವುದಿಲ್ಲ. ಕುಟುಂಬದಲ್ಲಿ ಕೂಡ, 'ಮನೆಯೊಂದು ಮೂರು ಬಾಗಿಲು' ಎನ್ನುವ ಮಾತು ನಿಜವಾಗಿರುವುದು ಮೊಬೈಲ್‌ಗಳ ದೆಸೆಯಿಂದಾಗಿಯೇ. ಮೊಬೈಲ್‌ಗಳು ಒಬ್ಬೊಬ್ಬರನ್ನೂ ದ್ವೀಪಗಳನ್ನಾಗಿಸುತ್ತಿವೆ. ಹೀಗೆ ದ್ವೀಪಗಳಾಗಿರುವ ಮನುಷ್ಯರನ್ನು ಮತ್ತೆ ಸಮಾಜಮುಖಿ ವ್ಯಕ್ತಿಗಳನ್ನಾಗಿ ಮಾಡಲು ಇರುವ ವ್ಯವಸ್ಥೆಯೇ ಮಾನವ ಗ್ರಂಥಾಲಯ.

**ಪ್ರಶ್ನೆಗಳು.**

I. ಹ್ಯೂಮನ್ ಲೈಬ್ರರಿಗಳು ಯಾವುದಕ್ಕೆ ಅವಕಾಶ ಕಲ್ಪಿಸುತ್ತಿವೆ ?

(a) ಸಾಮಾಜಿಕ ದುರಂತಗಳಿಗೆ

(b) ಭಿನ್ನ ವರ್ಗದ ವ್ಯಕ್ತಿಗಳೊಂದಿಗೆ ಮಾತುಕತೆಗೆ

(c) ಭಿನ್ನ ವರ್ಗದ ವ್ಯಕ್ತಿಗಳ ನಡುವಿನ ಹಿಂಸಾಚಾರಕ್ಕೆ

(d) ಜನರಲ್ಲಿ ಪೂರ್ವಾಗ್ರಹಗಳನ್ನು ಹೆಚ್ಚಿಸುವ

II. ಮೊದಲ ಮಾನವ ಗ್ರಂಥಾಲಯ ಎಲ್ಲಿ ಆರಂಭವಾಯಿತು ?

(a) ಭಾರತದಲ್ಲಿ (b) ಅಮೆರಿಕಾದಲ್ಲಿ (c) ಸ್ವೀಡನ್‌ನಲ್ಲಿ (d) ಡೆನ್ಮಾರ್ಕ್‌ನಲ್ಲಿ

III. ಮಾನವ ಗ್ರಂಥಾಲಯಗಳಿಗೆ ಏನನ್ನು ಶಮನಗೊಳಿಸುವ ಆಶಯವಿದೆ ?

(a) ಮನುಷ್ಯನೊಳಗಿನ ತೃಪ್ತಿಯನ್ನು (b) ಮನುಷ್ಯನೊಳಗಿನ ಹಿಂಸೆಯನ್ನು

(c) ಮನುಷ್ಯನೊಳಗಿನ ಕಲ್ಪನೆಯನ್ನು (d) ಮನುಷ್ಯನೊಳಗಿನ ಆತಂಕವನ್ನು

IV. ಜನರ ನಡುವೆ ಯಾವ ಗೋಡೆಯಿರುವ ಸನ್ನಿವೇಶವಿದೆ ?

(a) ಸುಣ್ಣದ ಗೋಡೆಯಿರುವ (b) ಮೊಬೈಲ್ ಫೋನಿನ ಗೋಡೆಯಿರುವ

(c) ಕಾಂಕ್ರೀಟ್ ಗೋಡೆಯಿರುವ (d) ಬಣ್ಣದ ಗೋಡೆಯಿರುವ

V. ಮಾನವ ಗ್ರಂಥಾಲಯಗಳು ಭಾರತದ ಯಾವ ಯಾವ ನಗರಗಳಲ್ಲಿವೆ ?

(a) ದೆಹಲಿ, ಬೆಂಗಳೂರು, ಹೈದರಾಬಾದ್, ಮುಂಬೈ

(b) ಹೈದರಾಬಾದ್, ಇಂದೋರ್, ಮುಂಬೈ, ಚೆನ್ನೈ

(c) ದೆಹಲಿ, ನಾಗ್ ಪುರ, ಮುಂಬೈ, ಚೆನ್ನೈ

(d) ಮುಂಬೈ, ಚೆನ್ನೈ, ಲಕ್ನೋ, ಹೈದರಾಬಾದ್

2. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ನಾಲ್ಕು ಕಾಲಿನ ವಾನರ ಎರಡು ಕಾಲಿನ ನರನಾಗಿ ವಿಕಾಸ ಹೊಂದಿದಾಗ ಮುಖ್ಯವಾಗಿ ಆದ ಬದಲಾವಣೆಗಳು ಎರಡು : ಯೋಚಿಸಬಲ್ಲ ಮಿದುಳಿನ ಬೆಳವಣಿಗೆ ಮತ್ತು ಮುಂಗಾಲುಗಳು 'ಕೈ' ಆಗಿ ರೂಪುಗೊಂಡದ್ದು. ಚಲನೆಯೇ ಮುಖ್ಯವಾಗಿದ್ದ ಚತುಷ್ಪಾದಿ ಸ್ಥಿತಿಯಿಂದ, ಎರಡು ಕೈಗಳಿರುವ ದ್ವಿಪಾದಿ ಸ್ಥಿತಿಗೆ ಮನುಕುಲ ಬಂತು. ಕೈಗಳು ರೂಪುಗೊಂಡಿದ್ದೇ 'ಕೆಲಸ' ಮಾಡಲು. ಮಾನವರಿಗೆ ಶ್ರಮವೇ ಕಲೆ, ಶ್ರಮವೇ ಆರಾಮ, ಶ್ರಮವೇ ಮನರಂಜನೆ. ಮನುಷ್ಯ ಜೀವಿಗೆ ಬಿಡುವು ಸಿಗಬೇಕೆಂದರೆ ಒಂದು ಕೆಲಸದಿಂದ ಇನ್ನೊಂದಕ್ಕೆ ನೆಗೆಯಲೇಬೇಕು ಎಂದು ಗುರುತಿಸುತ್ತಾನೆ ಅನತೋಲ್ ಫ್ರಾನ್ಸ್. ಎಂದರೆ ಶ್ರಮ ನಮ್ಮ ಸಂಸ್ಕೃತಿ ಅಲ್ಲ, ಅದು ಮಾನವ ಬದುಕಿನ ಮೂಲತತ್ವ.

ಮೇ ತಿಂಗಳು ಶ್ರಮವನ್ನು, ಶ್ರಮಿಕರನ್ನು ಮರುಗೌರವಿಸುವ ತಿಂಗಳು. ತಿಂಗಳ ಆರಂಭವೇ ಕಾರ್ಮಿಕರ ದಿನ. ಸರ್ವರಿಗೂ ಸಮಾನ ಅವಕಾಶ, ಹಕ್ಕು, ಅಧಿಕಾರಗಳಿರುವ ಸಮಸಮಾಜ ಪ್ರತಿಪಾದಿಸಿ ಅದನ್ನು ಸಾಕಾರಗೊಳಿಸುವ ಮಾರ್ಗವನ್ನು ಚರ್ಚಿಸಿದ ಮಾರ್ಕ್ಸ್ ಹುಟ್ಟಿದ ದಿನ ಮೇ 5. ಜೀವಿಗಳ ಶ್ರೇಷ್ಠತೆ ಕುಲದಿಂದಲ್ಲ, ಕಾಯಕದಿಂದ ಬರುತ್ತದೆಂದು 'ಕಾಯಕವೇ ಕೈಲಾಸ' ವೆಂದ ಬಸವಣ್ಣನ ಜಯಂತಿ ಮೇ 7 ರಂದು.

ದೈಹಿಕ ಶ್ರಮವು ಮಿದುಳಿನಲ್ಲಿ ಎಂಡಾರ್ಫಿನ್ ಎಂಬ ರಸದೂತವನ್ನು ಉತ್ಪತ್ತಿ ಮಾಡುತ್ತದೆ. ಅದು ನೈಸರ್ಗಿಕ ನೋವು ನಿವಾರಕ. ಆತಂಕದ ಮನಃಸ್ಥಿತಿಯನ್ನು ಶಮನಗೊಳಿಸುವ, ಆತ್ಮಗೌರವವನ್ನು ಹೆಚ್ಚು ಮಾಡುವ ಆಹ್ಲಾದವನ್ನು ಉದ್ದೀಪಿಸುವ ಕಣವೂ ಹೌದು.

ನಮ್ಮ ಹಿರಿಯರು ಶ್ರಮದ ಲಾಭವನ್ನು ತಿಳಿದಿದ್ದರು. ಸೋಮಾರಿತನವನ್ನು, ಕುಳಿತು ಉಣ್ಣುವುದನ್ನು ಹೀಗಳೆದ, ಶ್ರಮದ ಮಹತ್ವವನ್ನು ಸಾರುವ ಅಸಂಖ್ಯ ಗಾದೆ, ನುಡಿಗಟ್ಟು, ಪದ ಹಾಡುಗಳನ್ನು ಹೇಳಿದರು. ವಿಶ್ವದಲ್ಲಿಯೇ ಕಾಯಕವನ್ನು ಧರ್ಮ ಮಾಡಿಕೊಂಡ ಮೊದಲ ಆಧ್ಯಾತ್ಮವಾದಿಗಳು ಶಿವಶರಣರು. ಕಾಯದಿಂದ ಹುಟ್ಟುವುದೇ ಕಾಯಕ. ಕಾಯಕವೇ ಆಧ್ಯಾತ್ಮ ಸಾಧನೆಯ ಮೂಲ ಎಂದರು ಶರಣರು.

ಶ್ರಮ ಸಂಸ್ಕೃತಿಯ ಕಾಡುಮನುಷ್ಯ ನಾಗರಿಕಗೊಳ್ಳುತ್ತ ಹೋದಂತೆ ಕಾಯಕ ಸಂಸ್ಕೃತಿ ವಿರಾಮ ಸಂಸ್ಕೃತಿಯಾಗುವತ್ತ ಚಲಿಸಿತು.

**ಪ್ರಶ್ನೆಗಳು.**

I. ಮನುಕುಲ ಚತುಷ್ಪಾದಿ ಸ್ಥಿತಿಯಿಂದ ಯಾವ ಸ್ಥಿತಿಗೆ ಬಂತು ?

(a) ಏಕಪಾದಿ ಸ್ಥಿತಿಗೆ (b) ಪಂಚಪಾದಿ ಸ್ಥಿತಿಗೆ

(c) ದ್ವಿಪಾದಿ ಸ್ಥಿತಿಗೆ (d) ಚಲನೆಯ ಸ್ಥಿತಿಗೆ

II. ಶ್ರಮ ಯಾವುದರ ಮೂಲತತ್ವವಾಗಿದೆ ?

(a) ಬೆವರಿನ (b) ಮಾನವ ಬದುಕಿನ

(c) ಮಾನವ ಸಂಸ್ಕೃತಿಯ (d) ಮಾನವ ನಾಗರಿಕತೆಯ

III. ಜೀವಿಗಳ ಶ್ರೇಷ್ಠತೆ ಯಾವುದರಿಂದ ಬರುತ್ತದೆ ?

(a) ಕಾಯಕದಿಂದ (b) ವಿರಾಮದಿಂದ

(c) ಹೊಂದಾಣಿಕೆಯಿಂದ (d) ಹಿಂಸೆಯಿಂದ

IV. ದೈಹಿಕ ಶ್ರಮವು ಮಿದುಳಿನಲ್ಲಿ ಏನನ್ನು ಉತ್ಪತ್ತಿ ಮಾಡುತ್ತದೆ ?

(a) ಬುದ್ಧಿ ಶಕ್ತಿಯನ್ನು (b) ವಿಚಾರ ಶಕ್ತಿಯನ್ನು

(c) ಎಂಡಾರ್ಫಿನ್ ಎಂಬ ರಸದೂತವನ್ನು (d) ಸೂಕ್ಷ್ಮ ಸಂದೇಶಗಳನ್ನು

V. ಆಧ್ಯಾತ್ಮ ಸಾಧನೆಯ ಮೂಲ ಯಾವುದೆಂದು ಶಿವಶರಣರು ಹೇಳಿದ್ದಾರೆ ?

(a) ಶಿವಾರಾಧನೆ ಎಂದು (b) ಲಿಂಗ ಸಮಾನತೆ ಎಂದು

(c) ಕಾಯಕ ಎಂದು (d) ವಿಚಾರಗೋಷ್ಠಿಯೇ ಎಂದು

**ಅಥವಾ / OR**

ಒಂದು ಸಾಧಾರಣ ಮಳೆಗೆ ಕೆರೆ – ಕಾಲುವೆಗಳಂತಾಗುತ್ತಿರುವ ನಗರಗಳ ಕೆಲ ರಸ್ತೆ – ಬಡಾವಣೆಗಳು ಈ ಸಲದ ಮಾನ್ಸೂನ್ ಮಳೆಗೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಲಿದೆ ಎಂಬ ಸೂಚನೆ ನೀಡುತ್ತಿವೆ. ಸುರಿಯುವ ನಾಲ್ಕಾರು ಸೆಂ.ಮೀ. ಮಳೆಗೆ ತತ್ತರಿಸಿ ಹೋಗುವ ನಗರಗಳೇ ನಮ್ಮಲ್ಲಿ ಅಧಿಕ. ಬೀಳುವ ಮಳೆಯನ್ನು ಸಂಗ್ರಹಿಸಿ ಮರುಬಳಕೆ ಮಾಡುವ ನಗರಗಳು ನಮ್ಮ ದೇಶದಲ್ಲಿ ಬೆರಳೆಣಿಕೆಯಷ್ಟು ಮಾತ್ರ.

ಮಹಾನಗರಗಳ ಸುಧಾರಣೆಗೆ ವರ್ಷದಿಂದ ವರ್ಷಕ್ಕೆ ಬಜೆಟ್‌ನಲ್ಲಿ ಮೀಸಲಿರಿಸುವ ಹಣ ಹೆಚ್ಚುತ್ತಲೇ ಇದೆ. ಹಾಗೆಯೇ ರಸ್ತೆ, ಚರಂಡಿ, ಕಸ ನಿರ್ವಹಣೆಯ ಸವಾಲುಗಳು ಸಹ ಏರುತ್ತಿವೆ. ವಾಯುಮಾಲಿನ್ಯದಿಂದಾಗಿ ಎಳೆಯ ಮಕ್ಕಳ ಬೆಳವಣಿಗೆ ಸರಿಯಾಗಿ ಆಗುತ್ತಿಲ್ಲ. ವೃದ್ಧರು ನಗರ ಜೀವನಕ್ಕೆ ಯೋಗ್ಯರಲ್ಲ ಎಂಬ ವಿಷಮ ಪರಿಸ್ಥಿತಿ ನಿರ್ಮಾಣಗೊಂಡಿದೆ. ವಾಹನಗಳು ಉಗುಳುವ ಹೊಗೆ, ಹುಟ್ಟಿಸುವ ಓಝೋನ್ ಕಣಗಳು ಮನುಷ್ಯನ ಶ್ವಾಸಕೋಶವನ್ನು ಛಿದ್ರಗೊಳಿಸುತ್ತಿವೆ. ಮೈಲುದ್ದ ನಿಲ್ಲುವ ವಾಹನಗಳು, ಟ್ರಾಫಿಕ್ ಜಾಮ್, ಜನದಟ್ಟಣೆಯು ನಗರ ವಾಸಿಗಳ ಪಾಲಿಗೆ ದುಃಸ್ವಪ್ನದಂತೆ ಕಾಡುತ್ತಿವೆ. ವಾಯು ಸುಧಾರಣೆಗೆ ಮಾದರಿಯಾಗಬೇಕಿದ್ದ ನಗರಗಳು ವಾಯುಗುಣ ವೈಪರಿತ್ಯಕ್ಕೆ ಕುಮ್ಮಕ್ಕು ನೀಡುತ್ತಿವೆ.

ನಗರಗಳಾದ್ಯಂತ ಹಸಿರು ಮಾಯವಾಗಿ ಕಾಂಕ್ರೀಟು ನೆಲ – ಕಟ್ಟಡಗಳೇ ಆವರಿಸಿರುವುದರಿಂದ ನೀರು ನೆಲಕ್ಕೆ ಇಂಗದೆ ಅಂತರ್ಜಲ ಮಟ್ಟವೂ ಏರುವುದಿಲ್ಲ. ಸ್ಥಳೀಯವಾಗಿ ಮಳೆ, ನೀರು ಸಂಗ್ರಹದ ವ್ಯವಸ್ಥೆಗಳಿಲ್ಲ. ಕೆರೆ, ಹೊಂಡಗಳಲ್ಲಿ ನೀರಿಗಿಂತ ಊರಿನ ತ್ಯಾಜ್ಯ, ಹೂಳೇ ಹೆಚ್ಚು. ಸ್ಥಳೀಯ ನೀರಿನ ಮೂಲಗಳನ್ನು ಒಣಗಿಸಿ ನೂರಾರು ಮೈಲಿ ದೂರದಿಂದ ನೀರು ತರುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ನಾಲೆ, ಕೊಳವೆ ಹಾದು ಬರುವ ದಾರಿಯುದ್ದಕ್ಕೂ ಪರಿಸರದ ಮಾರಣಹೋಮ ನಡೆಯುತ್ತದೆ.

**ಪ್ರಶ್ನೆಗಳು.**

I. ಭಾರತದಲ್ಲಿ ಎಂತಹ ನಗರಗಳು ಅಧಿಕವಾಗಿವೆ ?

(a) ನೂರಾರು ಸೆಂ.ಮೀ. ಮಳೆಗೆ ತತ್ತರಿಸಿ ಹೋಗುವ

(b) ಅತಿವೃಷ್ಟಿಗೆ ತತ್ತರಿಸಿ ಹೋಗುವ

(c) ನಾಲ್ಕಾರು ಸೆಂ.ಮೀ. ಮಳೆಗೆ ತತ್ತರಿಸಿ ಹೋಗುವ

(d) ಅನಾವೃಷ್ಟಿಗೆ ತತ್ತರಿಸಿ ಹೋಗುವ

II. ನಗರಗಳಲ್ಲಿ ಯಾವ ಸವಾಲುಗಳು ಏರುತ್ತಲೇ ಇವೆ ?

(a) ಶಿಕ್ಷಣ ನೀಡುವ ಸವಾಲುಗಳು
(b) ರಸ್ತೆ, ಚರಂಡಿ, ಕಸ ನಿರ್ವಹಣೆಯ ಸವಾಲುಗಳು

(c) ಆರೋಗ್ಯ ನಿರ್ವಹಣೆಯ ಸವಾಲುಗಳು
(d) ಮೂಲ ವಸತಿಗಳನ್ನು ನೀಡುವ ಸವಾಲುಗಳು

III. ಎಳೆಯ ಮಕ್ಕಳ ಬೆಳವಣಿಗೆ ನಗರಗಳಲ್ಲಿ ಏಕೆ ಸರಿಯಾಗಿ ಆಗುತ್ತಿಲ್ಲ ?

(a) ಅಪೌಷ್ಠಿಕತೆಯಿಂದಾಗಿ
(b) ವಾಯುಮಾಲಿನ್ಯದಿಂದಾಗಿ

(c) ಶುದ್ಧ ಕುಡಿಯುವ ನೀರಿನ ಸಮಸ್ಯೆಯಿಂದಾಗಿ
(d) ವಾಹನಗಳ ದಟ್ಟಣೆಯಿಂದಾಗಿ

IV. ನಗರಗಳು ಯಾವುದಕ್ಕೆ ಕುಮ್ಮಕ್ಕು ನೀಡುತ್ತಿವೆ ?

(a) ಹಿಂಸಾಚಾರಕ್ಕೆ
(b) ಕುಡಿಯುವ ನೀರಿನ ಸಮಸ್ಯೆಗೆ

(c) ಪರಿಸರ ನಾಶಕ್ಕೆ
(d) ವಾಯುಗುಣ ವೈಪರಿತ್ಯಕ್ಕೆ

V. ನಾಲೆ, ಕೊಳವೆ ಹಾದು ಬರುವ ದಾರಿಯುದ್ದಕ್ಕೂ ಯಾವುದರ ಮಾರಣಹೋಮ ನಡೆಯುತ್ತದೆ ?

(a) ಪಕ್ಷಿಗಳ
(b) ಪ್ರಾಣಿಗಳ

(c) ಕ್ರಿಮಿ ಕೀಟಗಳ
(d) ಪರಿಸರದ

## Section – B

### ಅನ್ವಯಿಕ ವ್ಯಾಕರಣ (ಬಹು ಆಯ್ಕೆಯ ಪ್ರಶ್ನೆಗಳು) – 16 ಅಂಕಗಳು

**3.** ಕೆಳಗಿನ 5 ಬಹುಆಯ್ಕೆಯ ಪ್ರಶ್ನೆಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

I. ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.

ಇಳಕಲ್ಲ ಎಂಬುದು ಹುನಗುಂದ ತಾಲ್ಲೂಕಿನ ಒಂದು ಪಟ್ಟಣ.

(a) ಇಳಕಲ್ಲ ಹುನಗುಂದ ತಾಲ್ಲೂಕಿನ ಒಂದು ಪಟ್ಟಣವಿರಬಹುದೆ ?

(b) ಇಳಕಲ್ಲ ಎಂಬುದು ಹುನಗುಂದ ತಾಲ್ಲೂಕಿನ ಒಂದು ಪಟ್ಟಣವೇ ?

(c) ಇಳಕಲ್ಲ ಹುನಗುಂದ ತಾಲ್ಲೂಕಿನ ಒಂದು ಪಟ್ಟಣವಲ್ಲವೇ ?

(d) ಇಳಕಲ್ಲ ಯಾವ ತಾಲ್ಲೂಕಿನ ಒಂದು ಪಟ್ಟಣ ?

II. ಕೆಳಗಿನ ವಾಕ್ಯವನ್ನು ನಿಷೇದಾರ್ಥದಲ್ಲಿ ಬಳಸಿ.

ವೃದ್ಧರ ಬಾಯಚಪಲ ತಣಿಸುವ ಅಕ್ಷಯಪಾತ್ರೆ.

(a) ವೃದ್ಧರ ಬಾಯಚಪಲ ತಣಿಸುವ ಅಕ್ಷಯಪಾತ್ರೆಯಿರಬಹುದು.

(b) ವೃದ್ಧರ ಬಾಯಚಪಲ ತಣಿಸುವ ಅಕ್ಷಯಪಾತ್ರೆಯಾಗಲಿ.

(c) ವೃದ್ಧರ ಬಾಯಚಪಲ ತಣಿಸುವ ಅಕ್ಷಯಪಾತ್ರೆಯಿರುವುದು.

(d) ವೃದ್ಧರ ಬಾಯಚಪಲ ತಣಿಸುವ ಅಕ್ಷಯಪಾತ್ರೆಯಲ್ಲ.

III. ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.

ಮರುಗ್ಯಾಳ

(a) ಮರವಾಗುವಳು (b) ಮರುಗಿದಳೇ

(c) ಮರುಗು (d) ಮರುಗುವಳು

IV. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.

ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಾಯಿತು.

(a) ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಾಗುವುದು.

(b) ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಿಲ್ಲ.

(c) ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಿ.

(d) ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡುತ್ತಿದ್ದಾರೆ.

V. ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತು ತಿಳಿಸಿ.

ಸಾಮಾಜಿಕ ಉದ್ದೇಶಕ್ಕೆ ಹಣವನ್ನು ಸಂಗ್ರಹಿಸುತ್ತಾರೆ.

(a) ಉದ್ದೇಶಕ್ಕೆ (b) ಹಣವನ್ನು (c) ಸಂಗ್ರಹಿಸು (d) ಸಮಾಜ

**4.** ಕೆಳಗಿನ 5 ಬಹುಆಯ್ಕೆಯ ಪ್ರಶ್ನೆಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

I. ಕೆಳಗಿನ ಪದ ಬಿಡಿಸಿ ಬರೆಯಿರಿ.

ಸುಜನನಾಗುವನೆ

(a) ಸುಜನನು + ಆಗುವನೆ  (b) ಸುಜನ + ನಾಗುವನೆ

(c) ಸುಜನನಾ + ಗುವನೆ  (d) ಸುಜ + ನನಾಗುವನೆ

II. ಕೆಳಗಿನ ಪದದ ವಿಭಕ್ತಿ ಪ್ರತ್ಯಯ ಹೆಸರಿಸಿ.

ಮಂದಿರದೊಳ್

(a) ಷಷ್ಠಿ ವಿಭಕ್ತಿ ಪ್ರತ್ಯಯ  (b) ದ್ವಿತೀಯ ವಿಭಕ್ತಿ ಪ್ರತ್ಯಯ

(c) ಸಪ್ತಮಿ ವಿಭಕ್ತಿ ಪ್ರತ್ಯಯ  (d) ಚತುರ್ಥಿ ವಿಭಕ್ತಿ ಪ್ರತ್ಯಯ

III. ಕೆಳಗಿನ ಪದದ ತತ್ಸಮ – ತದ್ಭವ ಬರೆಯಿರಿ.

ವೀರ

(a) ಬೀರ  (b) ಶೂರ  (c) ಪರಾಕ್ರಮಿ  (d) ಧೀರ

IV. ಕೆಳಗಿನ ಪದದ ಸಮಾನಾರ್ಥಕ ಪದ ಬರೆಯಿರಿ.

ಉರಗ

(a) ಊರು  (b) ಹೊಟ್ಟೆ  (c) ಧ್ವಜ  (d) ಹಾವು

V. ಕೆಳಗಿನ ಪದದ ನಾನಾರ್ಥಗಳನ್ನು ಬರೆಯಿರಿ.

ಎಡೆ

(a) ಅವಕಾಶ, ಏಡಿ  (b) ಅವಕಾಶ, ನೈವೇದ್ಯ

(c) ನೈವೇದ್ಯ, ಎಂಟು  (d) ಸ್ಥಾನ, ಏಡಿ

5. ಕೆಳಗಿನ 5 ಬಹುಆಯ್ಕೆಯ ಪ್ರಶ್ನೆಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

I. ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.

ಶಿಕ್ಷಕನ ಸಂಬಳ ಹೆಚ್ಚಾದರೂ ಬಡತನ ದೂರವಾಗಲಿಲ್ಲ.

(a) ಶಿಕ್ಷಕನ ಸಂಬಳ ಹೆಚ್ಚಾಗಲಿಲ್ಲ ಬಡತನ ದೂರವಾಗಲಿಲ್ಲ.

(b) ಶಿಕ್ಷಕನ ಸಂಬಳ ಹೆಚ್ಚಿತಾದರೂ ಅವನ ಬಡತನ ದೂರವಾಗಲಿಲ್ಲ.

(c) ಶಿಕ್ಷಕನ ಸಂಬಳ ಹೆಚ್ಚಾದರೂ ಬಡತನ ಹೆಚ್ಚಾಯಿತು.

(d) ಶಿಕ್ಷಕನ ಸಂಬಳ ಹೆಚ್ಚಿತು, ಅವನ ಬಡತನ ದೂರವಾಗಲಿಲ್ಲ.

II. ಕೆಳಗಿನ ಪದ್ಯಭಾಗದ ಛಂದಸ್ಸಿನ ಹೆಸರು ತಿಳಿಸಿ.

ಕದಡಿದ ಸಲಿಲಂ ತಿಳಿವಂ

ದದೆ ತನ್ನಿಂ ತಾನೆ ತಿಳಿದ ದಶವದನಂಗಾ

(a) ಸಾಂಗತ್ಯ (b) ಕಂದಪದ್ಯ (c) ಭಾಮಿನಿ ಷಟ್ಪದಿ (d) ಚಂಪಕಮಾಲೆ

III. ಕೆಳಗಿನ ಗಾದೆಯನ್ನು ಪೂರ್ಣಗೊಳಿಸಿ.

ಕುಂಬಾರನಿಗೆ ವರುಷ ....................

(a) ನೇಕಾರನಿಗೆ ಹರುಷ (b) ದೊಣ್ಣೆಗೆ ನಿಮಿಷ

(c) ಮಕ್ಕಳಿಗೆ ಸಂತೋಷ (d) ಕಮ್ಮಾರನಿಗೆ ನಿಮಿಷ

IV. ಕೆಳಗಿನ ವಾಕ್ಯವನ್ನು ಭೂತಕಾಲಕ್ಕೆ ಬದಲಾಯಿಸಿ.

ಜೈಪುರದತ್ತ ವಿಮಾನಮಾರ್ಗ ಬದಲಾವಣೆ ಮಾಡುವರು.

(a) ಜೈಪುರದತ್ತ ವಿಮಾನಮಾರ್ಗ ಬದಲಾವಣೆ ಮಾಡಲಿ.

(b) ಜೈಪುರದತ್ತ ವಿಮಾನಮಾರ್ಗ ಬದಲಾವಣೆ ಮಾಡುತ್ತಾರೆ.

(c) ಜೈಪುರದತ್ತ ವಿಮಾನಮಾರ್ಗ ಬದಲಾವಣೆ ಮಾಡಿದರು.

(d) ಜೈಪುರದತ್ತ ವಿಮಾನಮಾರ್ಗ ಬದಲಾವಣೆ ಮಾಡಲಿಲ್ಲ.

V. ಕೆಳಗಿನ ವಾಕ್ಯದಲ್ಲಿರುವ ವಿಧ್ಯರ್ಥಕ ಕ್ರಿಯಾಪದ ಬರೆಯಿರಿ.

ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಲಿ.

(a) ಏಕದಿನ (b) ಘೋಷಿಸಲಿ (c) ನಿವೃತ್ತಿ (d) ಕ್ರಿಕೆಟ್ ಗೆ

6. ಕೆಳಗಿನ 5 ಬಹುಆಯ್ಕೆಯ ಪ್ರಶ್ನೆಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

I. ಕೆಳಗಿನ ಪದದ ಸಂಧಿ ಹೆಸರಿಸಿ.

ಸಜ್ಜನ

(a) ಗುಣಸಂಧಿ (b) ಯಣ್ ಸಂಧಿ (c) ಜಸ್ತ್ವ ಸಂಧಿ (d) ಶ್ಚುತ್ವ ಸಂಧಿ

II. ಕೆಳಗಿನ ಪದದ ಸಮಾಸ ಹೆಸರಿಸಿ.

ಕೃಷ್ಣಾರ್ಜುನರು

(a) ಅಂಶಿ ಸಮಾಸ (b) ಕ್ರಿಯಾ ಸಮಾಸ (c) ದ್ವಂದ್ವ ಸಮಾಸ (d) ದ್ವಿಗು ಸಮಾಸ

III. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಾಯಿಸಿ.

ಸತೀಶನು ತರಕಾರಿಗಳನ್ನು ಕೊಂಡನು.

(a) ಸತೀಶನು ತರಕಾರಿಗಳನ್ನು ಕೊಳ್ಳಲ್ಪಟ್ಟನು. (b) ತರಕಾರಿಗಳು ಸತೀಶನಿಂದ ಕೊಳ್ಳಲ್ಪಟ್ಟವು.

(c) ತರಕಾರಿಗಳು ಸತೀಶನನ್ನು ಕೊಂಡವು. (d) ತರಕಾರಿಗಳಿಂದ ಸತೀಶನು ಕೊಳ್ಳಲ್ಪಟ್ಟನು.

IV. ಕೆಳಗಿನ ಪದದ ವಿರುದ್ಧಾರ್ಥಕ ಪದ ಬರೆಯಿರಿ.

ಅಹಂಕಾರ

(a) ನಿರಹಂಕಾರ (b) ದುರಹಂಕಾರ (c) ಗರ್ವ (d) ಅಲಂಕಾರ

V. ಕೆಳಗಿನ ಆಂಗ್ಲ ವಾಕ್ಯದ ಕನ್ನಡ ರೂಪಾಂತರ ಆರಿಸಿ ಬರೆಯಿರಿ.

Happiness is the feeling of truly enjoying your life.

(a) ಸಂತೋಷವು ಆನಂದದ ಭಾವನೆ.

(b) ಸಂತೋಷವು ನಿಮ್ಮ ಜೀವನದ ಆನಂದದ ಸತ್ಯ.

(c) ಸಂತೋಷವು ನಿಮ್ಮ ಜೀವನವನ್ನು ನಿಜವಾಗಿಯೂ ಆನಂದಿಸುವ ಭಾವನೆಯಾಗಿದೆ.

(d) ಸಂತೋಷವು ಆನಂದಿಸುವ ಜೀವನದ ಭಾವನೆ.

## Section – C

**ವಾಚನ ಮತ್ತು ಗ್ರಹಿಕಾ ಕೌಶಲ :: ಪರಿಚಿತ ಪದ್ಯ, ಗದ್ಯ, ದೀರ್ಘಗದ್ಯ : 14 ಅಂಕಗಳು**

7. ಕೆಳಗಿನ ಪದ್ಯಭಾಗ ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಬ್ಯಾಸಗಿ ದಿವಸಕ ಬೇವಿನ ಮರ ತಂಪ।
ಭೀಮರತಿಯೆಂಬ ಹೊಳಿ ತಂಪ। ಹಡೆದವ್ವ
ನೀ ತಂಪ ನನ್ನ ತವರೀಗಿ॥

ಕಣ್ಣೆಂಜಲ ಕಾಡೀಗಿ ಬಾಯೆಂಜಲವೀಳ್ಯಾವ।
ಯಾರೆಂಜಲುಂಡು ನನಮನವ। ಹಡೆದೌವ್ನ
ಬಾಯೆಂಜಲುಂಡು ಬೆಳೆದೇನ॥

ಯಾರು ಇದ್ದರು ನನ್ನ ತಾಯವ್ವನ್ಹೋಲರ।
ಸಾವಿರಕೊಳ್ಳಿ ಒಲಿಯಾಗ। ಇದ್ದರ
ಜ್ಯೋತಿ ನಿನ್ಹ್ಯಾಗ ಹೋಲರ॥

ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಳು।
ಹುತ್ತದ ಒಳಗಿರೋ ಸರುಪನ। ಬೇಗೆಯ।
ನೆತ್ತಿ ಮೇಲಿರುವ ಶಿವಬಲ್ಲ॥

ತಾಯವ್ನ ಬೈಬ್ಯಾಡ ತಿಳಿಗೇಡಿ ನನ ತಮ್ಮ।
ಬಾಳದಿನದಾಕಿ ಹಡೆದವ್ವನ। ಬೈದರ।
ಭಾಳ ಮರುಗ್ಯಾಳ ಮನದಾಗ॥

**ಪ್ರಶ್ನೆಗಳು.**

I. ಬೇಸಿಗೆ ದಿವಸದಲ್ಲಿ ಯಾವ ನದಿ ತಂಪು ಎಂದು ಗರತಿ ಹೇಳುತ್ತಾಳೆ ?

(a) ಬೇವಿನ ನದಿ (b) ಭೀಮರತಿಯೆಂಬ ನದಿ

(c) ಘಟಪ್ರಭಾ ನದಿ (d) ಮಲಪ್ರಭಾ ನದಿ

II. ಗರತಿ ಯಾರ ಎಂಜಲವ ಉಂಡು ಬೆಳೆದಿದ್ದಾಳೆ ?

(a) ತಂದೆಯೆಂಜಲವ (b) ಅಣ್ಣನೆಂಜಲವ

(c) ತಮ್ಮನೆಂಜಲವ (d) ತಾಯಿಯೆಂಜಲವ

III. ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ ?

(a) ಜ್ಯೋತಿಗೆ (b) ಸಾವಿರ ಕೊಳ್ಳಿಗೆ

(c) ವಿದ್ಯುತ್ ದೀಪಕ್ಕೆ (d) ಸೂರ್ಯನ ಬೆಳಕಿಗೆ

IV. ತಾಯಿಯು ಯಾರ ದುಃಖವನ್ನು ಬಲ್ಲಳು ?

(a) ಮಗನ (b) ಗಂಡನ (c) ಹೆಣ್ಣುಮಕ್ಕಳ (d) ತಂದೆಯ

V. ಗರತಿ ತಾಯವ್ವ ಬೈಯ್ಯಬೇಡ ಎಂದು ಯಾರಿಗೆ ಹೇಳುತ್ತಾಳೆ ?

(a) ಅಕ್ಕಳಿಗೆ (b) ತಂಗಿಗೆ (c) ಅಣ್ಣನಿಗೆ (d) ತಮ್ಮನಿಗೆ

8. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಹೂಳೆತ್ತುವ ಕೆಲಸ ಹಾಗೆಯೇ ಮುಂದುವರಿದಿತ್ತು. ಮೂಳೆ ಮುರಿದು ಹೋಗುವಂತಹ ಕೆಲಸವದು. ಕುದುಪ ಸುಸ್ತಾದ. ಒಂದರೆಕ್ಷಣ ಅಲ್ಲೇ ನೀರೊಳಗೆ ಕುಸಿದು ಕುಳಿತ. ನೆರಳಿನಲ್ಲಿದ್ದ ಧಣಿಗಳಿಗೆ ಸಿಟ್ಟಿನಿಂದ ಪಿತ್ತವೇರಿದಂತಾಯ್ತು. 'ಎದ್ದೇಳೋ ಮೂರ್ಕಾಸಿನವ ... ಪಡಿ ಅಳೆಯುವಾಗ ಪಾವಕ್ಕಿ ಕಡಿಮೆ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು' ? ಎಂದು ಸಿಡುಕಿದರು. ಚೆನ್ನಮ್ಮನಿಗಂತೂ ಪಡಿಯಿಲ್ಲದ ಈ ದುಡಿತದ ಬಗ್ಗೆ ಇನ್ನಿಲ್ಲದಂತಹ ಅಸಮಾಧಾನವಿದೆ. ಒಂದೆಡೆ ಕಳ್ಳತನದ ಅಪವಾದ, ಮತ್ತೊಂದೆಡೆ ಕಠಿಣ ಶ್ರಮದ ದುಡಿತಕ್ಕೂ ಬೆವರಿಗೂ ಪ್ರತಿಫಲವಿಲ್ಲ. ಚೆನ್ನಮ್ಮ ತನ್ನ ಭಾರದ ಒಡಲನ್ನು ಕಣ್ಣೀರು ಜಿನುಗಿಸಿಕೊಂಡು ಮೆದುಗೊಳಿಸಿಕೊಂಡಳು. ಕುದುಪ ಧಣಿಯವರ ಸಿಡುಕು ಬೈಗಳಿಗೆ ಬೆದರಿ ಎದ್ದು ನಿಂತು ಮತ್ತೆ ಕೆಲಸದಲ್ಲಿ ಮಗ್ನನಾದ. ಗಂಡ ಹೆಂಡಿರಿಬ್ಬರೂ ಹೊಳೆಗೆ ಬೆವರಿನ ಮಳೆ ಸುರಿಸಿದರು. ಕುದುಪನಂತೂ ಆ ಬಿರುಬಿಸಿಲಿನ ಝಳಕ್ಕೆ ಕುಸಿಯುವಂತಾದ. ಆದರೂ ಧಣಿಗಳ ಭಯದಿಂದ ಕುಸಿಯದಾದ. ದೇಹದ ಮೂಲೆಮೂಲೆಗಳಿಂದ ಒಂದಷ್ಟು ತಾಕತ್ತನ್ನು ಸೋಸಿ ತಂದು ಮತ್ತೆ ಬುಟ್ಟಿಗೆ ಹೂಳು ತುಂಬ ತೊಡಗಿದ. ಬುಟ್ಟಿ ತುಂಬ ತೊಡಗಿತು ... ಇನ್ನೇನು ಹೂಳು ತುಂಬಿದ್ದ ಬುಟ್ಟಿಯನ್ನು ಚೆನ್ನಮ್ಮನ ತಲೆಗೇರಿಸಬೇಕೆನ್ನುವಷ್ಟರಲ್ಲಿ ನೋಡುತ್ತಾನೇನು ! ಅವ ಮೂರ್ಛೆ ಬೀಳುವಂತಾದ.

ನವಮಾಸಗಳ ಕಾಲ ಹೊಳೆಯ ಉದರದಲ್ಲಿ ಅಡಗಿದ್ದ ಧಣಿಗಳ ಬೆಳ್ಳಿಲೋಟದ ಮಂಕುಮೂತಿ ಕಾಣಿಸುತ್ತಿದೆ !

ಪ್ರಶ್ನೆಗಳು.

I. ಮೂಳೆ ಮುರಿದು ಹೋಗುವಂತಹ ಕೆಲಸ ಯಾವುದು ?

(a) ಚೀಲ ಹೊರುವ ಕೆಲಸ (b) ಹೂಳೆತ್ತುವ ಕೆಲಸ

(c) ಕಳೆ ಕೀಳುವ ಕೆಲಸ (d) ಧಾನ್ಯ ಒಕ್ಕುವ ಕೆಲಸ

II. ಧಣಿಗಳ ಬೆಳ್ಳಿಲೋಟ ನವಮಾಸಗಳ ಕಾಲ ಎಲ್ಲಿ ಅಡಗಿತ್ತು ?

(a) ಮನೆಯ ಹಿತ್ತಲಲ್ಲಿ (b) ಹೊಳೆಯ ದಡದಲ್ಲಿ

(c) ಹೊಳೆಯ ಉದರದಲ್ಲಿ (d) ಹೊಳೆಯ ಆಚೆ

III. ಚಿನ್ನಮ್ಮನಿಗೆ ಇನ್ನಿಲ್ಲದಂತಹ ಅಸಮಾಧಾನವಿರಲು ಕಾರಣವೇನು ?

(a) ಕಿತ್ತು ತಿನ್ನುವ ಬಡತನ

(b) ಗುಡ್ಡ ಅವಳ ಮಾತನ್ನು ಕೇಳುತ್ತಿರಲಿಲ್ಲ

(c) ಕುದುಪ ಅವಳಿಗೆ ಯಾವಾಗಲೂ ಹೀಯಾಳಿಸುತ್ತಿದ್ದ

(d) ಅವರ ಕಠಿಣ ಶ್ರಮದ ದುಡಿತಕ್ಕೆ ಪಡಿಯಿರಲಿಲ್ಲ

IV. ಕುದುಪ ಕುಸಿಯುವಂತಾಗಲು ಕಾರಣವೇನು ?

(a) ಬಿರುಬಿಸಿಲಿನ ಝಳ (b) ತುಂಬಾ ಹಸಿವಿನಿಂದ

(c) ಧಣಿಗಳ ಕಟುನುಡಿಗಳು (d) ಪ್ರತಿಫಲವಿಲ್ಲದ ದುಡಿಮೆ

V. ಕುದುಪ ಮತ್ತು ಚಿನ್ನಮ್ಮಳ ಮೇಲೆ ಯಾವ ಅಪವಾದ ಹೊರಿಸಲಾಗಿತ್ತು ?

(a) ಕಳ್ಳತನದ ಅಪವಾದ (b) ದುಡಿಮೆಗಳ್ಳರೆಂಬ ಅಪವಾದ

(c) ಹೆಚ್ಚು ಪಡಿ ಕೇಳುತ್ತಾರೆಂಬ ಅಪವಾದ (d) ಪದೆ ಪದೆ ರಜೆ ಕೇಳುತ್ತಾರೆಂಬ ಅಪವಾದ

9. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

ಚಾರ್ಮಾಡಿ ಹತ್ತಿರದ ದಟ್ಟಕಾಡನ್ನು ಸರ್ಕಾರ ವಿಮ್‌ಕೋ ಕಂಪನಿಗೆ ಬೆಂಕಿಕಡ್ಡಿ ಮರ ಕಡಿಯಲು ಗುತ್ತಿಗೆ ಕೊಟ್ಟಿತು. ಚಾರ್ಮಾಡಿ ಕಣಿವೆಯ ಪಾತಾಳದಲ್ಲಿದ್ದ ಮರಗಳನ್ನು ಲಾರಿ ದಾರಿಗೆ ಸಾಗಿಸಲು ಆನೆಯಲ್ಲದೆ ಮತ್ಯಾರಿಂದಲೂ ಸಾಧ್ಯವಿರಲಿಲ್ಲ. ಕೇರಳದಿಂದ ಆನೆ ಬಾಡಿಗೆಗೆ ತರಲು ಯೋಚಿಸುತ್ತಿದ್ದ ವಿಮ್‌ಕೋ ಕಂಪನಿಯವರ ಬಳಿ ಕೃಷ್ಣೇಗೌಡ ಅದನ್ನು ತನಗೇ ಕಂಟ್ರಾಕ್ಟ್ ಕೊಡಿ ಎಂದು ಕೇಳಿದ. ಕೃಷ್ಣೇಗೌಡ ದೂರದ ಗೂಳೂರು ಮಠದ ಈ ಹೆಣ್ಣಾನೆಯನ್ನು ಕೊಂಡು ಮೂಡಿಗೆರೆಗೆ ತಂದಿದ್ದು ಆಗಲೇ. ಆನೆಯೊಡನೆ ಆನೆಯ ಮಾವುತ ವೇಲಾಯುಧನೂ ಸಂಸಾರ ಸಮೇತವಾಗಿ ಮೂಡಿಗೆರೆಗೆ ಆಗಮಿಸಿದ. ಆ ಆನೆಗೆ ಭಾರಿ ಹಣಕೊಟ್ಟು ತಂದೆ ಎಂದು ಕೃಷ್ಣೇಗೌಡ ಬಡಾಯಿ ಕೊಚ್ಚುತ್ತಿದ್ದುದೇ ಹೊರತು ಆತ ಕೊಟ್ಟ ಹಣ ನಿಜಕ್ಕೂ ಆ ಆನೆಯ

ಬಾಲಕ್ಕೂ ಸಾಲದು. ಮಠದವರು ಮೊದಲೇ ಆ ಆನೆಯನ್ನೂ ಆನೆಯ ಮಾವುತನನ್ನೂ ಯಾರಿಗಾದರೂ ದಾಟಿಸಬೇಕೆಂದು ನೋಡುತ್ತಿದ್ದುದರಿಂದ ಕೃಷ್ಣೇಗೌಡ ಆ ಆನೆಯನ್ನು ಕೇಳಿದ ಕೂಡಲೇ ವೇಲಾಯುಧ ಮಠದಲ್ಲಿ ಮಾಡಿದ್ದ ನಾಲ್ಕೈದು ಸಾವಿರ ಸಾಲ ಹಿಂದಿರುಗಿಸಿದರೆ ಸಾಕು ಎಂದು ಕೊಡಲು ಒಪ್ಪಿದರು.

ಎಲ್ಲಾ ತರಹದ ವ್ಯವಹಾರಗಳನ್ನೂ ಮಾಡಿ ಎಲ್ಲದರಲ್ಲೂ ನಷ್ಟ ಅನುಭವಿಸಿ ಸೋತು ಹೋಗಿದ್ದ ಕೃಷ್ಣೇಗೌಡ ಆನೆಯನ್ನು ತಂದಾಗ ಇಲ್ಲಿಗೆ ಇವನ ಕತೆ ಮುಗಿದಂತೆಯೇ ಎಂದು ಎಲ್ಲಾ ತೀರ್ಮಾನಿಸಿದರು. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ ! ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಎಲ್ಲರೂ ದೃಢವಾಗಿ ನಂಬಿದ್ದರು.

**ಪ್ರಶ್ನೆಗಳು.**

I. ಕೃಷ್ಣೇಗೌಡ ಹೆಣ್ಣಾನೆಯನ್ನು ಕೊಳ್ಳಲು ಕಾರಣವೇನು ?

(a) ಅವನಿಗೆ ಆನೆ ಎಂದರೆ ಅಪಾರ ಪ್ರೀತಿ

(b) ತನಗೆ ಸಿಕ್ಕ ಕಂಟ್ರಾಕ್ಟಿನ ಕೆಲಸವನ್ನು ಪೂರ್ಣಗೊಳಿಸಲು

(c) ಆನೆಯನ್ನು ತಂದು ಪಳಗಿಸಲು

(d) ಆನೆಯನ್ನು ಸಾಕುವ ಹವ್ಯಾಸವಿತ್ತು

II. ಕೃಷ್ಣೇಗೌಡ ಏನೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದನು ?

(a) ಭಾರಿ ಹಣವನ್ನು ಕೊಟ್ಟು ಆನೆ ತಂದೆನೆಂದು

(b) ಪುಕ್ಕಟೆಯಾಗಿ ಆನೆ ತಂದೆನೆಂದು

(c) ನಾನು ಹೆಣ್ಣಾನೆಯ ಯಜಮಾನನೆಂದು

(d) ಎಂತಹ ಕೆಲಸವಾದರೂ ಸುಲಭವಾಗಿ ನಿಭಾಯಿಸಬಲ್ಲೆನೆಂದು

III. ಯಾವುದು ಎಲೆಕ್ಷನ್ನಿಗೆ ನಿಂತ ಹಾಗೆ ?

(a) ಆನೆಯನ್ನು ಕೊಳ್ಳುವುದು ಎಂದರೆ　(b) ಮಾವುತನನ್ನು ಸಾಕುವುದು ಎಂದರೆ

(c) ಆನೆಯನ್ನು ಸಾಕುವುದು ಎಂದರೆ　(d) ಆನೆಯನ್ನು ಮಾರುವುದು ಎಂದರೆ

IV. ಮಾವುತ ವೇಲಾಯುಧ ಸಂಸಾರ ಸಮೇತವಾಗಿ ಎಲ್ಲಿಗೆ ಆಗಮಿಸಿದ ?

(a) ಚಾರ್ಮಾಡಿ ಕಣಿವೆಗೆ　(b) ಮೂಡಿಗೆರೆಗೆ

(c) ಗೂಳೂರು ಮಠಕ್ಕೆ　(d) ವಿಮ್‌ಕೋ ಕಂಪನಿಗೆ

## Section – D

10. ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. **3 × 2 = 6**

I. ಯಾವ ಸಂದೇಶವನ್ನು ನೀಡುವ ರೀತಿಯಲ್ಲಿ ಜೀಸಸ್ ಶಿಲುಬೆಯೇರಿದ್ದಾನೆ ?

II. ಕೇಂದ್ರದ ರೈಲು, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ ?

III. ನಿರೂಪಕರು ಕ್ಯಾಲ್ಕ್ಯುಲೇಟರ್‌ನಲ್ಲಿ ಲೆಕ್ಕಹಾಕಿ ಜಬ್ಬಾರ್‌ಗೆ ಏನೆಂದರು ?

11. ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **3 × 3 = 9**

I. ಮಗುವೇ ಮೊದಲ ವಿಜ್ಞಾನಿ.

II. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು ?

**ಅಥವಾ**

ಗಂಜಿಗೂ ಗತಿಯಿಲ್ಲ

III. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

12. ಕೆಳಗಿನ ಯಾವುದಾದರೂ ಒಬ್ಬ ಲೇಖಕ / ಕವಿಯ ಕೃತಿ ಪರಿಚಯ ಮಾಡಿಕೊಡಿ. **1 × 3 = 3**

I. ಕುಮಾರವ್ಯಾಸ II. ಪುಲಿಗೆರೆ ಸೋಮನಾಥ III. ಕೆ.ಎಸ್. ನಿಸಾರ್ ಅಹಮದ್

13. ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ. **3 × 4 = 12**

I. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ ?

**ಅಥವಾ**

ಮುದ್ದಣ – ಮನೋರಮೆಯರ ಸಂವಾದದ ಸ್ವಾರಸ್ಯ ವಿವರಿಸಿ.

II. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು ?

**ಅಥವಾ**

ವೃದ್ಧರ ತವಕ – ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ ?

III. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

**ಅಥವಾ**

'ಕೃಷ್ಣೇಗೌಡನ ಆನೆ' ಕಥೆಯಲ್ಲಿ ಬರುವ ಭ್ರಷ್ಟ ವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

14. ಯಾವುದಾದರೂ ಒಂದು ವಿಷಯದ ಬಗ್ಗೆ **150-200** ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. **1 × 5 = 5**

I. ತ್ಯಾಜ್ಯ ವಸ್ತುಗಳ ಪುನರ್ಬಳಕೆ II. ಮಾತೃಭಾಷೆಯಲ್ಲಿ ಶಿಕ್ಷಣ III. ನನ್ನ ನೆಚ್ಚಿನ ಪುಸ್ತಕ

15. ನಿಮ್ಮ ವರ್ಗಾವಣೆ ಪತ್ರ, ಅಂಕಪಟ್ಟಿ ಕೋರಿ ನಿಮ್ಮ ವಿದ್ಯಾಲಯದ ಪ್ರಾಚಾರ್ಯರಿಗೆ ಪತ್ರ ಬರೆಯಿರಿ. **1 × 5 = 5**

**ಅಥವಾ**

ನಿಮ್ಮ ಊರಿಗೆ ವಿದ್ಯುಚ್ಛಕ್ತಿಯ ಸಮರ್ಪಕ ಸರಬರಾಜು ಮಾಡುವಂತೆ ಕೋರಿ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಒಂದು ಪತ್ರ ಬರೆಯಿರಿ.